ಶ್ರೀ ವಿಶ್ವನಾಥ ಪಾಟೀಲ್.— ಮಾನ್ಯ ಮಂತ್ರಿಗಳಿಗೆ ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲ ಎಂದು ನನಗನ್ನಿಸುತ್ತದೆ. ಮಾನ್ಯ ಮಂತ್ರಿಗಳು ೧–೧೦–೧೯೮೧ ರಿಂದ ಚಿತ್ತಾಪುರದಲ್ಲಿ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇದೆ ಎಂದು ಹೇಳಿದ್ದಾರೆ. ಅದು ಸರಿಯಲ್ಲ. ೧–೪–೧೯೮೧ ರಿಂದಲೇ ಆ ಹುದ್ದೆ ಖಾಲಿ ಇದೆ. ನಾನು ಬೇಕಾದರೆ ಸಂಬಂಧಪಟ್ಟ...

ಉಪಾಧ್ಯಕ್ಷರು.—ಪ್ರಶ್ನೆ ಕೇಳಿ.

ಶ್ರೀ ವಿಶ್ವನಾಥ ಪಾಟೀಲ್.—ಸರಿಯಾದ ದಾಖಲೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಕೊಟ್ಟಿಲ್ಲ ವೆಂದು ನನಗನ್ನಿಸುತ್ತಿದೆ. ಎರಡನೆಯ ಪ್ರಶ್ನೆಗೆ ಆರೋಗ್ಯ ಘಟಕಗಳನ್ನು ಕಟ್ಟಲು ೨೫,೦೦೦ ರೂಪಾಯಿ ಮತ್ತು ೪ ಎಕರೆ ಜಮೀನನ್ನು ದಾನವಾಗಿ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಅದೂ ಸರಿಯಾಗಿಲ್ಲ. ೨೫ ಸಾವಿರ ರೂಪಾಯಿ ಮತ್ತು ೪ ಎಕರೆ ಭೂಮಿ ಕೊಟ್ಟಿದ್ದಾರೆ. ಆದ್ದರಿಂದ ಈ ಪ್ರಶ್ನೆಯನ್ನು ತಡೆಹಿಡಿದು ಸರಿಯಾದ ಮಾಹಿತಿ ತರಿಸಿ ಉತ್ತರ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಉತ್ತರ ತೃಪ್ತಿಕರವಾಗಿಲ್ಲ ದಿರುವುದರಿಂದ ಬೇರೆ ಉತ್ತರವನ್ನು ಕೊಡಬೇಕೆಂದು ಹೇಳಬಯಸುತೆ ೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಆಯಿತು.

ಶ್ರೀ ಯಡಿಯೂರಪ್ಪ.—ಈ ವೈದ್ಯಾಧಿಕಾರಿಗಳ ಹುದ್ದೆಗಳು ಇಡೀ ರಾಜ್ಯದಲ್ಲಿ ಖಾಲಿ ಇವೆ. ಒಬ್ಬ ಮೆಡಿಕಲ್ ವಿದ್ಯಾರ್ಥಿಗೆ ಲಕ್ಷಾಂತರ ರೂಪಾಯಿಗಳನ್ನು ಸರ್ಕಾರದ ಬೊಕ್ಕಸದಿಂದ ಖರ್ಚು ಮಾಡುತ್ತಿದ್ದಾರೆ. ಆದರೆ ಅವರು ಮೆಡಿಕಲ್ ವಿದ್ಯಾಭ್ಯಾಸ ಮುಗಿಸಿಕೊಂಡು ಪದವೀಧರರಾದ ಮೇಲೆ ಹೊರ ದೇಶಕ್ಕೆ ಸೇವೆ ಮಾಡುವುದಕ್ಕೆ ಹೋಗುತ್ತಿದ್ದಾರೆ. ನಮ್ಮ ದೇಶಕ್ಕೆ ಅವರ ಸೇವೆ ಸಿಗುತ್ತಿಲ್ಲ. ಆದ್ದರಿಂದ ಅಡ್ಮಿಷನ್ ವೇಳೆಯಲ್ಲಿ ಕನಿಷ್ಟ ಇಷ್ಟು ವರ್ಷಗಳ ಕಾಲ ಇಲ್ಲಿ ಸೇವೆ ಸಲ್ಲಿಸಲೇಬೇಕು ಎಂಬ ನಿಬಂಧನೆ ಹಾಕುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆ ಮಾಡದಿದ್ದರೆ ವೈದ್ಯಾಧಿಕಾರಿಗಳ ಕೊರತೆ ಇದ್ದೇ ಇರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಸದಸ್ಯರ ಸಲಹೆಗಳನ್ನು ನೋಡುತ್ತೇನೆ.

ಶ್ರೀ ಬಸವರಾಜ ಪಾಟೀಲ್.—ಪ್ರತಿಯೊಂದು ಜಿಲ್ಲೆಯ ಪ್ರತಿಯೊಂದು ಆಸ್ಪತ್ರೆಗಳಲ್ಲೂ ಹುದ್ದೆಗಳು ಖಾಲಿ ಇವೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕು.

ಉಪಾಧ್ಯಕ್ಷರು —ಮಾನ್ಯ ಸದಸ್ಯರು ಚಿತ್ತಾಪುರದ ಆಸ್ಪತ್ರೆ ಬಗ್ಗೆ ಕೇಳಿದ್ದಾರೆ. ಆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಭಾರತೀಯ ವೈದ್ಯಪದ್ಧತಿ ಕಾಲೇಜುಗಳಲ್ಲಿ ನಿರ್ದೇಶಕರ ಸ್ಥಾನ ಭರ್ತಿ ಮಾಡುವ ಬಗ್ಗೆ

೭೩. ಶ್ರೀ ಪೆಟ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಆರೋಗ್ಯ ಮತ್ತು ಕಾರ್ಮಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೆ ?

(ಅ) ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಯ ಪೂರ್ಣಾವಧಿ ನಿರ್ದೇಶಕರ ಸ್ಥಾನವು ಎಷ್ಟು ಕಾಲದಿಂದ ಖಾಲಿ ಇದೆ ? ಆಗಿದ್ದಲ್ಲಿ ಆದಕ್ಕೆ ಕಾರಣಗಳೇನು :

(ಆ) ಈ ಇಲಾಖೆಯಲ್ಲಿನ ಉಪ-ನಿರ್ದೇಶಕರ ಹುದ್ದೆಗಳು ಎಷ್ಟು ಹುದ್ದೆಗಳನ್ನು ಖಾಯಂ ಆಗಿ ನೇಮಕ ಮಾಡಲಾಗಿದೆ ;

(ಇ) ಸರ್ಕಾರಿ ಭಾರತೀಯ ವೈದ್ಯ ವಿದ್ಯಾಲಯಗಳಲ್ಲಿ ಹಾಲಿ ಇರುವ ಪ್ರಾಂಶುಪಾಲರ ಸಂಖ್ಯೆ ಪೂರ್ಣಾವಧಿ ಸ್ಥಾಯಿ ವೈದ್ಯಾಧಿಕಾರಿಗಳ ಹುದ್ದೆಗಳು ;

(ಈ) ಕಾನೂನಿಗನುಗುಣವಾಗಿ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಲಿಗೆ ಚುನಾವಣೆ ನಡೆದ ದಿನಾಂಕ ;

(ಉ) ಎಷ್ಟು ಹುದ್ದೆಗಳು ಎಷ್ಟು ಕಾಲದಿಂದ ಆಸ್ಪತ್ರೆ ಮತ್ತು ವಿದ್ಯಾಲಯಗಳಲ್ಲಿ ಖಾಲಿ ಇವೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

(ಅ) ನಿರ್ದೇಶಕರ ಹುದ್ದೆಯು ದಿನಾಂಕ ೩೧-೧-೧೯೭೭ರಿಂದ ಖಾಲಿಯಿದೆ. ಈ ಹುದ್ದೆಯನ್ನು ತುಂಬಲು ಕರ್ನಾಟಕ ಲೋಕಸೇವಾ ಆಯೋಗದ ಸಲಹೆ ಪಡೆದು ಸರ್ಕಾರವು ಪರಿಶೀಲಿಸುತ್ತದೆ.

(ಆ) ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ನಿರ್ದೇಶನಾಲಯದಲ್ಲಿ ಮೂರು ಉಪ ನಿರ್ದೇಶಕರ ಹುದ್ದೆಗಳಿದ್ದು ಅವುಗಳಲ್ಲಿ ಒಂದು ಹುದ್ದೆಯನ್ನು ತುಂಬಲಾಗಿದೆ, ಉಳಿದ ಎರಡು ಹುದ್ದೆಗಳನ್ನು ತುಂಬಲು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಈ ಉದ್ದೇಶಕ್ಕಾಗಿ ವಿಧಿ ನಿರ್ವಾಹಕ ಆದೇಶಗಳನ್ನು ಹೊರಡಿಸಲಾಗಿದೆ.

(ಇ) ಮೂರು ಆಯುರ್ವೇದ ಪ್ರಾಂಶುಪಾಲರ ಹುದ್ದೆಗಳು ಮತ್ತು ಒಂದು ಯುನಾನಿ ಪ್ರಾಂಶುಪಾಲರ ಹುದ್ದೆ ಒಟ್ಟು ನಾಲ್ಕು ಪ್ರಾಂಶುಪಾಲರ ಹುದ್ದೆಗಳು ಮತ್ತು ನಾಲ್ಕು ಸ್ಥಾಯಿ ವೈದ್ಯಾಧಿಕಾರಿಗಳ ಹುದ್ದೆಗಳು ಇವೆ.

(ಈ) ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಲಿಗೆ ಚುನಾವಣೆಗಳು ನಡೆದಿಲ್ಲ. ಚುನಾವಣೆ ನಡೆಸಲು ಪ್ರಯತ್ನ ಮಾಡಲಾಯಿತು. ಆದರೆ ಅಷ್ಟರಲ್ಲೇ ಕೆಲವರು ಉಚ್ಚ ನ್ಯಾಯಾಲಯದಲ್ಲಿ ದಾವೆ ದಾಖಲ್ಮಾಡಲಾಗಿ ಚುನಾವಣೆ ನಡೆಸಲಿಲ್ಲ.

(ಉ) ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಗೆ ಸಂಬಂಧಪಟ್ಟ ವಿದ್ಯಾಲಯ ಮತ್ತು ಆಸ್ಪತ್ರೆಗಳಲ್ಲಿ ಈ ಕೆಳಕಂಡಂತೆ ಹುದ್ದೆಗಳು ಖಾಲಿ ಇವೆ.

ವಿದ್ಯಾಲಯ ವಿಭಾಗ

೧.	ಪ್ರಾಂಶುಪಾಲರು	...	೨
	(ಇಬ್ಬರು ಪ್ರಾಧ್ಯಾಪಕರುಗಳನ್ನು ಕಾರ್ಯಭಾರ ಪ್ರಾಂಶುಪಾಲರಾಗಿ ನೇಮಿಸಲಾಗಿದೆ)		
೨.	ಪ್ರಾಧ್ಯಾಪಕರು	...	೯
೩.	ಉಪ ಪ್ರಾಧ್ಯಾಪಕರು	...	೨೦
೪.	ಉಪನ್ಯಾಸಕರು	...	

ಆಸ್ಪತ್ರೆ ವಿಭಾಗ

೧.	ಸ್ಥಾಯಿ ವೈದ್ಯಾಧಿಕಾರಿಗಳು	...	೨

ಇಬ್ಬರು ಎರಡನೇ ದರ್ಜೆ ವೈದ್ಯಾಧಿಕಾರಿಗಳನ್ನು ಕಾರ್ಯಭಾರ ಸ್ಥಾಯಿ ವೈದ್ಯಾಧಿಕಾರಿಗಳಾಗಿ ನೇಮಿಸಲಾಗಿದೆ.

೨.	ಒಂದನೇ ದರ್ಜೆ ವೈದ್ಯಾಧಿಕಾರಿ	...	೧
೩.	ಎರಡನೇ ,, ,,	...	೧೦
೪.	ಮೂರನೇ ,, ,,	...	೧

ಹುದ್ದೆಗಳು ಖಾಲಿಯಿರುವ ಅವಧಿಯನ್ನು ಅಡಕಗೊಳಿಸಿದ ನಿರೂಪಣೆಯಲ್ಲಿ ಕೊಡಲಾಗಿದೆ.

ನಿರೂಪಣೆ

ಪ್ರಾಂಶುಪಾಲರು ೨	೧. ಬಳ್ಳಾರಿಯಲ್ಲಿ ದಿನಾಂಕ ೧-೧-೧೯೬೨ ರಿಂದ ೧. ಮೈಸೂರಿನಲ್ಲಿ ದಿನಾಂಕ ೨೪-೮-೧೯೬೮. ರಿಂದ ಇಬ್ಬರು ಪ್ರಾಧ್ಯಾಪಕರುಗಳು ಕಾರ್ಯಭಾರ ಪ್ರಾಂಶು ಪಾಲರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.
ಪ್ರಾಧ್ಯಾಪಕರುಗಳು ೯	ಬೆಂಗಳೂರಿನಲ್ಲಿ ದಿನಾಂಕ ೬-೯-೧೯೬೯ರಿಂದ ಒಂದು ಹುದ್ದೆ ಬೆಂಗಳೂರಿನಲ್ಲಿ ಮಾರ್ಚ್ ೧೯೬೯ ರಿಂದ ಎರಡು ಹುದ್ದೆಗಳು. ಬೆಂಗಳೂರಿನಲ್ಲಿ ೧೯೬೨ ರಿಂದ ಒಂದು ಹುದ್ದೆ. ಮೈಸೂರಿನಲ್ಲಿ ೧೯೬೮ ರಿಂದ ಐದು ಹುದ್ದೆಗಳು.
ಉಪ ಪ್ರಾಧ್ಯಾಪಕರುಗಳು ೨೦	ಮೈಸೂರಿನಲ್ಲಿ ನವೆಂಬರ್ ೭೭ ಮತ್ತು ಮಾರ್ಚ್ ೬೮ ರಿಂದ ಎರಡು ಹುದ್ದೆಗಳು. ಬೆಂಗಳೂರಿನಲ್ಲಿ ಏಳು ಹುದ್ದೆಗಳು. ಒಂದು ಹುದ್ದೆಯು ಹೊಸದಾಗಿ ಸ್ನಾತಕೋತ್ತರ ವಿಭಾಗಕ್ಕೆ ಮಂಜೂರಾಗಿದೆ. ಉಳಿದ ಹುದ್ದೆಗಳು ಐದು ವರ್ಷ ಗಳ ಮೇಲ್ಪಟ್ಟಿನಿಂದಲೂ ಖಾಲಿ ಇವೆ.
ಉಪನ್ಯಾಸಕರು ೩ ಹುದ್ದೆಗಳು	ಬೆಂಗಳೂರಿನಲ್ಲಿ ಶಲ್ಯತಂತ್ರ ಸ್ನಾತಕೋತ್ತರ ಪದವಿಗೆ ಹೊಸದಾಗಿ ಮಂಜೂರಾದವು.

ಆಸ್ಪತ್ರೆ ವಿಭಾಗ

ಸ್ಥಾಯಿ ವೈದ್ಯಾಧಿಕಾರಿಗಳು ೨	ಇಬ್ಬರು ಎರಡನೇ ದರ್ಜೆ ವೈದ್ಯಾಧಿಕಾರಿಗಳು ಕಾರ್ಯಭಾರ ಸ್ಥಾಯಿ ವೈದ್ಯಾಧಿಕಾರಿಗಳಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಶಿವಮೊಗ್ಗದಲ್ಲಿ ಸೆಪ್ಟೆಂಬರ್ ೮೨ ರಿಂದ ಒಂದನೆ ದರ್ಜೆ ವೈದ್ಯಾಧಿಕಾರಿ. ಎರಡನೆ ದರ್ಜೆ ವೈದ್ಯಾಧಿಕಾರಿಗಳು - ೧೦. ಈ ಹುದ್ದೆಗಳಲ್ಲಿ ಮೂರನೇ ದರ್ಜೆ ವೈದ್ಯಾಧಿಕಾರಿಗಳು ಕಾರ್ಯಭಾರ ಎರಡನೇ ವೈದ್ಯಾಧಿಕಾರಿಗಳಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಮೂರನೆ ದರ್ಜೆ ವೈದ್ಯಾಧಿಕಾರಿ-೧. ಮೇ ೧೯೬೨ ರಿಂದ ಖಾಲಿ ಇದೆ.

ಶ್ರೀ ಎಚ್. ಗಂಗಾಧರನ್.—ಅಧ್ಯಕ್ಷರೇ, ೩೧-೧-೧೯೭೭ ರಿಂದ ಅಂದರೆ ಕಳೆದ ಆರು ವರ್ಷ ಗಳಿಂದ ನಿರ್ದೇಶಕರ ಹುದ್ದೆ ಖಾಲಿ ಇದೆ. ಈ ಬಗ್ಗೆ ೬ ವರ್ಷದಿಂದ ಲೋಕ ಸೇವಾ ಆಯೋಗದಿಂದ ಸಲಹೆ ಪಡೆಯುತ್ತಿದ್ದಾರಾ ? ಈ ಬಗ್ಗೆ ಸರ್ಕಾರ ಕೆಲಸ ಮಾಡುತ್ತಿದೆಯೇ ಇಲ್ಲ ಕಣ್ಣು ಮುಚ್ಚಿ ಕೊಂಡಿದೆಯೇ ? ಈ ಬಗ್ಗೆ ತಡ ಆಗಿರುವುದು ಏಕೆ ? ಹೋಮಿಯೋಪತಿ ನಿರ್ದೇಶನಾಲಯದಲ್ಲಿ ಮೂರು ಉಪ ನಿರ್ದೇಶಕರ ಹುದ್ದೆಗಳು, ಆಯುರ್ವೇದ ಪ್ರಾಂಶುಪಾಲಕರ ಮೂರು ಹುದ್ದೆಗಳು. ಯುನಾನಿ ಪ್ರಾಂಶುಪಾಲರ ಒಂದು ಹುದ್ದೆ, ನಾಲ್ಕು ಸ್ಥಾಯಿ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಈ ಬಗ್ಗೆ ಸರ್ಕಾರದ ಧೋರಣೆ ಏನು ? ಯುನಾನಿ ವೈದ್ಯ ಮಂಡಲಿ ಚುನಾವಣೆ ಬಗ್ಗೆ ದಾಖಲಾತಿ ಆಗಿ ಚುನಾವಣೆ ನಡೆಸಲಿಲ್ಲವೆಂದಿದ್ದೀರಿ. ಈ ದಾವೆಯನ್ನು ವಜಾ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿದೆಯೇ ? ವಿದ್ಯಾಲಯದ ವಿಭಾಗದಲ್ಲಿ ಪ್ರಾಂಶುಪಾಲರು—೨, ಪ್ರಾಧ್ಯಾಪಕರು—೯ ಉಪಪ್ರಾಧ್ಯಾಪಕರು—೨೦, ಉಪನ್ಯಾಸಕರು—೩ ಹುದ್ದೆಗಳು, ಆಸ್ಪತ್ರೆ ವಿಭಾಗದಲ್ಲಿ ಸ್ಥಾಯಿ ವೈದ್ಯಾಧಿಕಾರಿಗಳ ಹುದ್ದೆ—೨ ಒಂದನೇ, ಎರಡನೇ ಪಾಳಿಗೂ ಮೂರನೇ ದರ್ಜೆ, ವೈದ್ಯಾಧಿಕಾರಿಗಳ ಒಟ್ಟು ೧೨ ಹುದ್ದೆಗಳು ಖಾಲಿ ಇವೆಯೆಂದಿದ್ದೀರಿ. ಮೈಸೂರಿನಲ್ಲಿ ೧೯೭೮ ರಿಂದ ೨ ಪ್ರಾಂಶುಪಾಲರ ಹುದ್ದೆಗಳು ಖಾಲಿ ಇವೆ. ಪ್ರಾಧ್ಯಾಪಕರುಗಳ ಹುದ್ದೆ ೮ ಬೆಂಗಳೂರು ಮತ್ತು ಮೈಸೂರಿನಲ್ಲಿ ೧೯೭೯ರಿಂದ ಹಾಗೂ ೧೯೮೮ ರಿಂದ ಖಾಲಿ ಇವೆ. ಉಪ-ಪ್ರಾಧ್ಯಾಪಕರ ಹುದ್ದೆಗಳು ೧೯೮೮ ರಿಂದ ಖಾಲಿ ಇವೆ. ಅಂದರೆ ಕಳೆದ ೨೦-೨೫ ವರ್ಷಗಳಿಂದ ಖಾಲಿ ಇದೆ. ಈ ಬಗ್ಗೆ ಆರೋಗ್ಯ ಮಂತ್ರಿಗಳಿಗೆ ಆರೋಗ್ಯ ಇದೆಯೋ ಗೊತ್ತಿಲ್ಲ. ನಾನು ಈ ಸರ್ಕಾರಕ್ಕೆ ಮಾತ್ರ ಕೇಳುತ್ತಿಲ್ಲ. ಹಿಂದಿನ ಸರ್ಕಾರ ಗಳಿಗೂ ನಾನು ಈ ಮೂಲಕ ಪ್ರಶ್ನೆ ಕೇಳುತ್ತಿದ್ದೇನೆ. ಹಾಗೂ ಈ ಬಗ್ಗೆ ಹಿಂದಿನಿಂದಲೂ ಕೇಳು ತ್ತಿದ್ದೇನೆ. ಹಿಂದೆ ನಾನು ಪ್ರಶ್ನೆ ಕೇಳಿದಾಗ ಆಗಿನ ಮಂತ್ರಿಗಳು ಮಾಡುತ್ತೇವೆ ಮಾಡುತ್ತೇವೆಂದು ಹೇಳುತ್ತಾ ಹೊರಟು ಹೋದರು. ನಾವೂ ನೀವು ಸದಸ್ಯರಾಗಿರುವಾಗಲೇ ಇದನ್ನು ಮಾಡುತ್ತೀರಾ ? ತೀಕ್ಷ್ಣವಾಗಿ ಈ ಹುದ್ದೆಗಳನ್ನು ತುಂಬುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಸದಸ್ಯರಿಗೆ ಈ ಬಗ್ಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಇದೆ. ನಾನು ಈ ಖಾತೆಯನ್ನು ಕೇವಲ ಎರಡು ತಿಂಗಳ ಹಿಂದೆಯಿಂದ ಹೊತ್ತಿದ್ದೇನೆ. ೧೯೭೭ರಿಂದ ಈ ಹುದ್ದೆಗಳನ್ನು ಏಕೆ ತುಂಬಲಿಲ್ಲ ಎನ್ನುವ ಬಗ್ಗೆ ನಾನು ಉತ್ತರ ಕೊಡುವುದಕ್ಕಾಗುವುದಿಲ್ಲ. ಈ ಬಗ್ಗೆ ಜನರೇ ಉತ್ತರವನ್ನು ಕೊಟ್ಟಿದ್ದಾರೆ. ಇನ್ನು ರಿಟ್ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಆದಷ್ಟು ಜಾಗ್ರತೆ ಮಾತನಾಡಿ ಆ ಬಗ್ಗೆ ಪ್ರಯತ್ನಪಡುತ್ತೇನೆ. ಈಗ ಏನು ಹುದ್ದೆಗಳು ಖಾಲಿ ಇವೆ ಅವೆಲ್ಲಾ ಹಾಗೇ ಖಾಲಿ ಇಲ್ಲ. ಅಲ್ಲಿ ಕೆಲವರು ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆ. ಹಾಗೂ ಖಾಲಿ ಇರುವ ಜಾಗಗಳನ್ನು ತುಂಬುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇನೆ.

ಸಾಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ಮನವಿಗಳು

(i) ದೈನಂದಿನ ಪತ್ರಿಕೆಯಲ್ಲಿ ಬಂದ ಗಡಿ ವಿವಾದದ ಸುದ್ದಿಯ ಬಗ್ಗೆ

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷರೇ, ನಾನು ನಿಯಮ ೩೩೪ರ ಕೆಳಗೆ ಒಂದು ನೋಟೀಸನ್ನು ಕೊಟ್ಟಿದ್ದೇನೆ. ಈ ದಿನದ ಕನ್ನಡ ಪ್ರಭ ಪತ್ರಿಕೆಯಲ್ಲಿ "ಗಡಿ ವಿವಾದ ಇತ್ಯರ್ಥಕ್ಕೆ ಪಾಟೀಲ್ ಹೊಸ ಸೂತ್ರ" ಎಂಬ ಶೀರ್ಷಿಕೆಯಲ್ಲಿ ಒಂದು ಸುದ್ದಿ ಬಂದಿದೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಒಂದು ಕೆಲಸ ಮಾಡಿದ್ದಾರೆ. ಅವರು ಮತ್ತು ಹೆಗ್ಗಡೆಯವರು ಕೂತು ಈ ಬಗ್ಗೆ ಚರ್ಚೆ ಮಾಡಿ